SHORT NOTICE QUESTION AND ANSWER

Cholera Epidemic in Hiriyur Taluk.

*Q.—34. Sri V. MASIYAPPA (Hiriyur).—

Will the Government be pleased to state:—

(*a*) when cholera epidmic broke out in Hiriyur Taluk ;

(*b*) the number of cases of attacks and the number of deaths due to cholera in the said taluk ;

(*c*) the number of cases of attacks and deaths in Hiriyur Town ;

(*d*) the measures taken by Government so far to protect the people of the above taluk against this epidemic ?

A.—Sri K. NAGAPPA ALVA (Minister for Health).—

(*a*). 19-6-1964.

(*b*) Attacks	...	...	79
Deaths	...	...	33
(*c*) Attacks	...	...	43
Deaths	...	...	11

(*d*) (1) Treatment of patients.

(2) Anti-cholera inoculations.

(3) Chlorination of drinking water sources.

(4) Strict control over food catering establishments and sale of cut fruits and vegetables.

(5) Health Education.

(6) Improvement of general sanitation.

Sri K. NAGAPPA ALVA.—Answers are printed excepting in the case of figures which have to be corrected now as up-to-date. The attacks in Hiriyur Taluk are 229 and deaths 68; attacks in Hiriyur town are 161 and deaths 51. It has come under control actually.

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ರಾಜ್ಯದಲ್ಲಿ ಈ ಕಾಲರಾ ರೋಗ ಎಷ್ಟು ಜನರಿಗೆ ತಗುಲಿದೆ? ಎಷ್ಟು ಜನ ಮೃತಪಟ್ಟರು ಎನ್ನುವ ಸಂಪೂರ್ಣ ವಿವರವನ್ನು ನಾಳೆ ಕೊಡುತ್ತೇನೆ ಎಂದು ಮಾನ್ಯ ಮಂತ್ರಿಗಳು ನಿನ್ನೆಯ ದಿನ ಹೇಳಿದರು. ಆ ವಿವರ ಈಗ ಸರ್ಕಾರದಲ್ಲಿ ಇದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇದೆ ಕೊಡುತ್ತೇನೆ. In Chitaldrug District 14 Villages in Hiriyur Taluk and 16 Villags in Challakere Taluk were affected. In Hiriyur Town there have been 169 attacks and 55 deaths. But on 29-6-1964, there have been only 9 attacks and one death. In Challakere Town there have been 6 attacks and one death. In Gulberga City there were 30 attacks and 11 deaths, and over 18,000 anti-Cholere inoculation have been done.

ಶ್ರೀ ಎ. ಮಸಿಯಪ್ಪ.—ಈಗ ಹಿರಿಯೂರು ತಾಲ್ಲೂಕಿನಲ್ಲಿ ಸಾಕಾದಷ್ಟು ವ್ಯಾಕ್ಸೀನ್, ಸೀರಂ ಇಲ್ಲದೇ ಮತ್ತು ಇನಾಕ್ಯೂಲೇಷನ್ ಮಾಡುವುದಕ್ಕೆ ಡಾಕ್ಟರುಗಳು ಮತ್ತು ಇತರ ಸಿಬ್ಬಂದಿ ಸಾಕಾದಷ್ಟು ಇಲ್ಲದೆ ಇನಾಕ್ಯೂಲೇಷನ್ ಮಾಡತಕ್ಕ ಕಾರ್ಯ ಸ್ಥಗಿತವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇನೂ ಇಲ್ಲ. ಈ ಎಲ್ಲಾ ವಿಷಯಗಳಲ್ಲೂ ಬೇಕಾದಷ್ಟು ಕೆಲಸ ನಡೆದಿದೆ. ಅಲ್ಲಿ ಬೇಕಾಗಿದ್ದುದಕ್ಕಿಂತಲೂ ಹೆಚ್ಚು ಜನರನ್ನು ಹಾಕಿದ್ದೇವೆ ಮತ್ತು ಬೇಕಾದಷ್ಟು ವ್ಯಾಕ್ಸೀನ್ನು ಸರಬರಾಯಿ ಮಾಡಿದ್ದೇವೆ. ಬೆಂಗಳೂರಿನಲ್ಲೂ ಈಗ ಬೇಕಾದಷ್ಟು ಸ್ಟಾಕ್ ಇಟ್ಟುಕೊಂಡಿದ್ದೇವೆ, ಅದು ಮಾತ್ರವಲ್ಲದೆ ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಜನರು ಕನ್ಪ್ಯೂಷನ್ ಕ್ರಿಯೇಟ್ ಮಾಡುತ್ತಾ ಇದ್ದಾರೆ ಎಂಬುದನ್ನು ಹೇಳುವಂಥದು ಈ ಸಮಯದಲ್ಲಿ ಅಗತ್ಯ ಎಂದು ಕಾಣುತ್ತದೆ. ಯಾರು ಜನರ ಪ್ರತಿನಿಧಿಗಳು ಇದ್ದಾರೆ ಅವರು ನನಗೆ ಒಂದು ಸಾವಿರ ವ್ಯಾಕ್ಸೀನ್ ಕೊಡಿ, 10 ಸಾವಿರ ವ್ಯಾಕ್ಸೀನ್ ಕೊಡಿ ಎಂದು ಸುಮ್ಮನೆ ಗಲಾಟೆ ಮಾಡುತ್ತಾರೆಯೇ ಹೊರತು ಒಂದು ತರಹದ ಕೋ-ಆಪರೇಷನ್ ನೀಡುತ್ತಿಲ್ಲ; ಆದರೂ ಜನಸಾಮಾನ್ಯರು ಹೆಚ್ಚಿನ ಮಟ್ಟಿಗೆ ಕೋ-ಆಪರೇಷನ್ ಕೊಟ್ಟಿದ್ದಾರೆ. ನಾನು ಹೇಳಿದ ರೀತಿಯಲ್ಲಿ ಹಿರಿಯೂರು ಟೌನ್ ಒಂದರಲ್ಲೇ 13 ಸಾವಿರ ಜನಸಂಖ್ಯೆ ಇರುವ ಕಡೆ 12 ಸಾವಿರ ಜನರಿಗೆ ವಾಕ್ಸಿನೇಷನ್ ಮಾಡಲಾಗಿದೆ. ಈ ರೀತಿಯಲ್ಲಿ ಎಲ್ಲಾ ಕಡೆಯೂ ಎಲ್ಲೆಲ್ಲ ವ್ಯಾಕ್ಸಿನೇಷನ್ ಮಾಡಲು ವ್ಯಾಕ್ಸೀನೇಷನ್ ಅಭಾವ ಇವೆಯೋ ಅಂತಹ ಕಡೆಗೆ ಕಳುಹಿಸಲು ಈ ಸಭೆಯಲ್ಲಿ ಹೇಳುವುದಾದರೆ ನಮ್ಮಲ್ಲಿ ಸ್ಟಾಕು ಇದೆ, ಮದರಾಸಿನಿಂದ ಮೊನ್ನೆ 2 ಲಕ್ಷ ಬಂದಿದೆ, ಪುನಃ 3 ಲಕ್ಷ ಕಳುಹಿಸಲು ಒಪ್ಪಿದ್ದಾರೆ, ಹೈದರಾಬಾದಿನಿಂದ ನಾಳೆ ಬರುತ್ತದೆ, ಬೊಂಬಾಯಿನಿಂದ ಒಂದು ಲಕ್ಷ ಬರುತ್ತದೆ, ಈ ರೀತಿ ಸಂಪೂರ್ಣವಾದ ಸ್ಟಾಕ್ ಅದಕ್ಕೆ ಬೇಕಾದ ಔಷಧಿ ಮತ್ತು ಇತರ ಅನುಕೂಲಗಳನ್ನು ಒದಗಿಸಿ ಇದನ್ನು ಹತೋಟಿಗೆ ತರಲು ಮತ್ತು ಸಾಧ್ಯವಾದಷ್ಟೂ ನಿರ್ಮೂಲ ಮಾಡಲು ಬೇಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎ. ಮಸಿಯಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಹಿರಿಯೂರು ಟೌನ್ ಮತ್ತು ಚಾನಲ್ ಅಜೂ ಬಾಜೂ ಗ್ರಾಮಗಳಲ್ಲಿ ಮಾತ್ರ ಇನಾಕ್ಯೂಲೇಷನ್ ಮತ್ತು ಪ್ರೊಟೆಕ್ಷನ್ ಮೆಷರ್ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೇನೆ, ಇತರ ಹಳ್ಳಿಗಳಿಗೆ ಜನರು ಹೋಗಿ ಅಲ್ಲಿ ಈ ರೋಗ ಹರಡಿರತಕ್ಕ ಕಡೆ ಸಾಕಷ್ಟು ಇನಾಕ್ಯೂಲೇಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಿಲ್ಲ ಈ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಹಿರಿಯೂರು ತಾಲ್ಲೂಕಿಗೆ ಸಂಬಂಧಪಟ್ಟ 12 ಗ್ರಾಮಗಳಲ್ಲಿ ಬೇಕಾದಷ್ಟು ವ್ಯಾಕ್ಸೀನ್ ಕೊಟ್ಟು ಸೂಕ್ತವಾದ ಕ್ರಮಗಳನ್ನೂ ಕೂಡ ನಾವು ಇಷ್ಟರಲ್ಲಿಯೇ ತೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಗೋಪಾಲ ಸಾರೆನ್ನ.—ಈ ಗಂಡಾಂತರ ಮತ್ತು ಗೊಂದಲದ ಸಮಯದಲ್ಲಿ ನನಗೆ ವ್ಯಾಕ್ಸೀನ್ ಬೇಕು, ನನಗೆ ವ್ಯಾಕ್ಸೀನ್ಬೇಕು ಎಂದು ವ್ಯಾಕ್ಸೀನ್ ಕೇಳುವಂತಹ ಪ್ರತಿನಿಧಿಗಳು ಯಾರು ಮತ್ತು ಏಕೆ ಅವರು ಆ ರೀತಿ ಹೇಳುತ್ತಾರೆ ?

ಶ್ರೀ ಕೆ. ನಾಗಪ್ಪ ಆಳ್ವ.—ನಾನು ಹೇಳಿದ್ದು ಇಷ್ಟೆ ಇದು ಏನಾಗುತ್ತದೆ ಎಂದು ಒಂದು ತರಹ ಸ್ಕೇರ್ ಕ್ರಿಯೇಟ್ ಆಗುತ್ತದೆ. Some confusion has been created. We can send these things through the proper channel and proper people only. We can get people inoculated and certain arrangements made to control these.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಕಾಲರಾ ವ್ಯಾಧಿ ನಮ್ಮ ದೇಶಕ್ಕೆ ಪ್ರತಿ ವರ್ಷವೂ ಬಂದು ಸಾವಿರಾರು ಜನರನ್ನು ಆಹುತಿ ತೆಗೆದುಕೊಳ್ಳುತ್ತಾ ಇದೆ, ಪ್ಲೇಗ್ ರೋಗವನ್ನು ತಡೆಗಟ್ಟಿದಂತೆ ಇದನ್ನೂ ಕೂಡ ತಡೆಗಟ್ಟುವುದಕ್ಕೆ ಸಾಧ್ಯವೇ ? ಈ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಎಲ್ಲರಿಗೂ ತಿಳಿದ ವಿಷಯ. ಬೇಕಾದಷ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದೇವೆ, ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಮಾಡಬೇಕಾಗುತ್ತದೆ. ಎಲ್ಲೆಲ್ಲಿ ರೋಗ ಹರಡುತ್ತದೆ ಅಲ್ಲೆಲ್ಲಾ ಇನಾಕ್ಯೂಲೇಷನ್ ಮಾಡಿ ಪ್ರೊಟೆಕ್ಟ್ ಮಾಡಬೇಕಾಗುತ್ತದೆ. We have to protect the people against this disease and take all the control measures that are necessary.

ಶ್ರೀ ವಿ. ಮುನಿಯಪ್ಪ.—ಹಿರಿಯೂರು ಟೌನ್‌ನಲ್ಲಿ ಇಷ್ಟು ಜಾಸ್ತಿ ಪ್ರಮಾಣದಲ್ಲಿ ಹರಡುವುದಕ್ಕೆ ಕಾರಣ ಮಾನ್ಯ ಸಚಿವರು ನನ್ನೆ ಉತ್ತರ ಕೊಡುತ್ತಾ ಯಾರೋ ಬಚ್ಚೆ ಬಗೆದರು ಅನ್ನುವುದರಿಂದ ಹೀಗೆ ಆಯಿತು ಎಂದು ಹೇಳಿದರು. ಹಿರಿಯೂರು ಟೌನ್‌ನಲ್ಲಿ ಜನರಿಗೆ ಕುಡಿಯಲು ನೀರಿನ ವ್ಯವಸ್ಥೆ ಬೇರೆ ಯಾವುದೂ ಇಲ್ಲ ಟಾನಲ್ ವಾಟರ್‌ನ್ನೇ ಕುಡಿಯುತ್ತಿರುವುದು. ಆದ್ದರಿಂದ ಬೋರ್‌ವೆಲ್ ನೀರನ್ನು ಅಥವಾ ಟಾನಲ್ ವಾಟರನ್ನು ಕ್ಲೋರಿನೇಟ್ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಹಿರಿಯೂರಿನಲ್ಲಿ ಸಾಧಾರಣ ಎಂಟು ಮೈಲಿ ದೂರದಲ್ಲಿ ಕರುಬರಹಳ್ಳಿಯಿಂದ ಬರುವಂತಹ ಟಾನಲ್‌ನಲ್ಲಿ ಈ ಮಾಸ್ ಇನ್‌ಫೆಕ್ಷನ್ ಬಂದಿದೆ ಎಂದು ನಿನ್ನೆ ಹೇಳಿದ್ದೇನೆ ಅದನ್ನು ತಡೆಹಿಡಿಯುವುದಕ್ಕೆ ಈ ಮುಂಜೆ ಸಾಕಾದಷ್ಟು ಕೆಲಸ ಮಾಡಿದ್ದೇವೆ ಹಿರಿಯೂರು ಟೌನ್‌ನಲ್ಲಿ ಕೂಡ ಎಲ್ಲೆಲ್ಲಿ ಬಾವಿ ಇದೆ ಅದರ ನೀರನ್ನೂ ಕೂಡ ಡಿಸ್‌ಇನ್‌ಫೆಕ್ಟ್ ಮಾಡಲಾಗಿದೆ. ಕೆಲವು ಕಡೆ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ ಎಂದು ಕೇಳಿದ್ದೇನೆ ಆದರಿಂದ ಕೂಡ ನೀರನ್ನು ಒದಗಿಸುವಂತಹ ಏರ್ಪಾಡನ್ನು ಮಾಡುತ್ತಾ ಇದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಆಹಾರದ ಅಭಾವವಿರುವ ಕಡೆ ಈ ಸಾಂಕ್ರಾಮಿಕ ರೋಗ ಬೇಗ ಹರಡುತ್ತದೆಯಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗಿಲ್ಲ, ರೋಗ ಹರಡುವುದಕ್ಕೂ ಆಹಾರ ಅಭಾವಕ್ಕೂ ನೇರ ಸಂಬಂಧವಿಲ್ಲ.

ಶ್ರೀ ಎಸ್. ನುಚ್ಚಯ್ಯ ನಾಯಕ್.—ಕಾಲರಾ ರೋಗವಿರುವ ಕಡೆಗೆ ಇತರ ಪ್ರದೇಶಗಳಿಂದ ಜನರು ಹೋಗುವುದನ್ನೂ ಮತ್ತು ಅಲ್ಲಿನವರು ಬೇರೆ ಕಡೆಗೆ ಹೋಗುವುದನ್ನೂ ಪ್ರತಿಬಂಧಿಸುವ ಅಗತ್ಯವಿದೆಯೇ ? ಹಾಗಿದ್ದರೆ ಪ್ರತಿಬಂಧಿಸಿದ್ದೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೆ ಸಂಪೂರ್ಣವಾಗಿ ಪ್ರತಿಬಂಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಂತೆ, ಜಾತ್ರೆ ಆಗುವ ಕಡೆ ಪ್ರತಿಬಂಧಕ ಹಾಕಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ವಿ. ಮುನಿಯಪ್ಪ.—ಕಾಲರ ಇರುವ ಕಡೆ ಟ್ರೀಟ್‌ಮೆಂಟಿಗೆ ಬೇಕಾದ ಔಷಧ ಸಾಮಾಗ್ರಿಗಳಿಲ್ಲದಿರುವುದರಿಂದ ಅವನ್ನು ಜಾಗ್ರತೆ ಸರಬರಾಯಿಮಾಡಿ ಜನರಿಗೆ ರಕ್ಷಣೆಕೊಡಲು ತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗಾಗಲೆ ಅದಕ್ಕೆ ಸೂಕ್ತ ಕಾರ್ಯಕ್ರಮ ಕೈಕೊಂಡಿದ್ದೇವೆ. ಯಾರದೋ ಹೇಳಿಕೆ ಮಾತನ್ನು ಕೇಳಿ ಗಾಬರಿ ಪಡಬಾರದು. ಈ ದಿವನ ಕೂಡ ಆ ಬಗ್ಗೆ ನಮಗೆ ವರದಿ ಬಂದಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಔಷಧಿಗಳ ಸರಬರಾಜಿನ ಜೊತೆಗೆ ಪಥ್ಯ ಮತ್ತು ಉಪಚಾರಕ್ಕೆ ಬೇಕಾದ ಆಹಾರ ಪದಾರ್ಥಗಳನ್ನೂ ಕೂಡ ಒದಗಿಸುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆಹಾರ ಪದಾರ್ಥಗಳನ್ನು ಒದಗಿಸುವ ವಿಷಯದಲ್ಲಿ ಜನರು ಸಹಕರಿಸಿ ಸಾಧ್ಯವಿರುವ ಕಡೆ ವ್ಯವಸ್ಥೆ ಮಾಡಬೇಕೇ ಹೊರತು ಸರ್ಕಾರ ಆ ಕೆಲಸ ಮಾಡುವುದಕ್ಕಾಗುವುದಿಲ್ಲ.

Mr. SPEAKER.—Question Hour is over.

QUESTIONS FOR ANSWERS ON THE DAY
(but not taken up)

Discussions in respect of Border Adjustments between the Chief Ministers of Mysore and Maharashtra.

*Q.—567. Sri A. J. DODDAMETI (Ron).—

Will the Government be pleased to state :—

(*a*) whether it is a fact that the Chief Minister of Mysore met the Chief Minister of Maharastra recently in Bombay ;